**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

**O.S. No.2000/2025**
**DW: 1**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 07.11.2025**

**ಪಾಟೀ ಸವಾಲುಃ : ವಾದಿ ಪರ ವಕೀಲರಾದ: ಶ್ರೀಮತಿ . ವಿ ಎಮ್ ರವರಿಂದ**

1. ನನಗೆ ವಾದಿಯ ಪರಿಚಯ ಇರುವುದಿಲ್ಲ. ನಾನು ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಸಹೋದರನಾದ ರಮೇಶ್ ಗೌಡನಿಗೆ ಸೇರಿರುತ್ತದೆ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂದ ಇರದೇ ಇದ್ದರೂ ಸಹಾ ನಾನು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ರಮೇಶ್ ಗೌಡನಿಗೆ ಸೇರರುತ್ತದೆ ಹಾಗೂ ಆತನೇ ಸ್ವಾಧೀನಾನುಭವದಲ್ಲಿರುತ್ತಾನೆ. ನನ್ನ ಲಿಖಿತ ಹೇಳಿಕೆಯಲ್ಲಿ ನಮೂದಿಸಿರುವ ಸ್ವತ್ತು ಸರ್ವೆ ನಂ. 1/1 ರ ಭಾಗವಾಗಿರುತ್ತದೆ. ಸರ್ವೆ ನಂ. 1/1 ರ ಚೆಕ್ಕುಬಂದಿಯೂ ಪೂರ್ವಕ್ಕೆ ರಾಜಕಾಲುವೆ, ಪಶ್ಚಿಮಕ್ಕೆ ಅಣ್ಣಯ್ಯಪ್ಪರವರ ಸ್ವತ್ತು, ಉತ್ತರಕ್ಕೆ ಖಾಸಗಿ ಸ್ವತ್ತು ಮತ್ತು ದಕ್ಷಿಣಕ್ಕೆ ಸರ್ವೆ ನಂ.1/2 ಇರುತ್ತದೆ. ವಾದಿಯ ದಾವಾ ಸ್ವತ್ತಿಗೂ ನನಗೆ ಯಾವುದೇ ಸಂಬಂದ ಇರುವುದಿಲ್ಲ ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ನಮುೂದಿಸಿರುವುದಿಲ್ಲ ಎಂದರೆ ಸರಿ.

2. ವಾದಿಯು ನನಗೆ ಪರಿಚಯ ಹಾಗೂ ಆತನ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇದ್ದರೂ ಸಹಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 1/1 ರ ಜಮೀನಿನಲ್ಲಿ ನನ್ನ ತಾತನಾದ ನಂಜಪ್ಪ, ಅಣ್ಣಯ್ಯಪ್ಪ ಹಾಗೂ ಕೆಂಪಣ್ಣರವರು ಒಟ್ಟಾಗಿ ಬಡಾವಣೆ ನಿರ್ಮಾಣ ಮಾಡಿರುತ್ತಾರೆ. ಸರ್ವೆ ನಂ. 1/1 ಮೂಲತಃ ವೆಂಕಟರಮಣ ಬೋವಿ ರವರಿಗೆ ಸೇರಿದ ಸ್ವತ್ತು. ದಾವಾ ಸ್ವತ್ತಿನ ಚೆಕ್ಕುಬಂದಿ ಹಾಗೂ ನನ್ನ ಲಿಖಿತ ಹೇಳಿಕೆಯಲ್ಲಿ ನಮೂದಿಸಿರುವ ಸ್ವತ್ತಿನ ಚೆಕ್ಕುಬಂದಿ ವ್ಯತರಿಕ್ತವಾಗಿರುತ್ತದೆ ಎಂದರೆ ಸರಿ.

3. ದಾವಾ ಸ್ವತ್ತು ವಾದಿಯ ಮಾಲೀಕತ್ವದಲ್ಲಿದ್ದು ನನಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 2 ರ ಕ್ರಯ ಪತ್ರದಲ್ಲಿ ನಂಜೇಗೌಡರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿ ಹೆಸರಿನಲ್ಲಿ ಇರುವುದು ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾವಾ ಸ್ವತ್ತು ನನ್ನ ಸಹೋದರರಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಅಮಾಣಿ ಬೈರತಕಾಣೆಯಲ್ಲಿರುತ್ತದೆ. ವಾದಿಯು ನನ್ನ ವಿರುದ್ದ ಪೋಲೀಸರ ಮುಂದೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

O.S. No.2000/2025
DW: 1

**ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೆ. ಆರ್. ಪುರಂ**